**OS No.50/2022**

**DW-02**

**ಇಂದು ದಿನಾಂಕ:** 09.02.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಸಿ.ಜಿ. ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ 78 ವರ್ಷ ವಯಸ್ಸು ಎಂದು ಬರೆಸಿದ್ದೇನೆ. ಈ ದಿನ ಮಹೇಂದ್ರ ಎಂಬುವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಈ ಕೇಸು ಹೊರತುಪಡಿಸಿ ನಮ್ಮ ಗ್ರಾಮದಲ್ಲಿ ಯಾರು ಯಾರು ಕೇಸು ಹಾಕಿದ್ದಾರೆ ಎಂದು ಗೊತ್ತಿಲ್ಲ. ಈ ಕೇಸು ಯಾರು ಯಾರ ಮೇಲೆ ಮತ್ತು ಯಾವ ಪರಿಹಾರಕ್ಕಾಗಿ ಕೇಸು ಹಾಕಿದ್ದಾರೆ ಎಂದು ಗೊತ್ತಿಲ್ಲ. ನಾನು ಪರವಾಗಿ ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದು ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ಗ್ರಾಮಸ್ಥರು ಎಂದು ಬರೆಸಿಲ್ಲ. ದಾವಾ ಆಸ್ತಿ ಕಾಳಮರಿರವರಿಗೆ ಹೇಗೆ ಬಂದಿದೆ ಎಂದು ಗೊತ್ತಿಲ್ಲ.

ದಾವಾ ಆಸ್ತಿಯ ಮೂಲ ಮಾಲೀಕರು ಯಾರು ಎಂದು ಗೊತ್ತಿಲ್ಲ. ದಿನಾಂಕ 25.08.1955 ರಂದು ಹೆಚ್.ಎಂ.ಕರಿಯಪ್ಪ ಅಲಿಯಾಸ್ ಕರೀಗೌಡರಿಗೆ ಕ್ರಯಕ್ಕೆ ಬಂದ ಸ್ವತ್ತು ಎಂದು ಬರೆಸಿಲ್ಲ. ದಾವಾ ಆಸ್ತಿ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ಸ.ನಂ.35 ರಲ್ಲಿ 28 ಗುಂಟೆಯಲ್ಲಿ ಯಾರು ಸ್ವಾಧೀನ ಇದ್ದಾರೆ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ, ಸ.ನಂ.39 ರಲ್ಲಿ 1 ಎಕರೆ ಜಮೀನು ಎಂದು ನಾನು ಬರೆಸಿಲ್ಲ. ನಮ್ಮ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ನನಗೆ ಮೂರು ಜನ ಮಕ್ಕಳು ಅವರೆಂದರೆ ದೇವರಾಜ, ಮಲ್ಲೇಶ ಮತ್ತು ಬಸವರಾಜು, ಅವರು ಜನ್ಮ ದಿನಾಂಕ ಮತ್ತು ಮದುವೆಯ ದಿನಾಂಕ ನೆನಪಿಲ್ಲ.

ಹೆಚ್.ಕೆ.ಮಲ್ಲೇಶ ಮಾಗಳಿ ಗ್ರಾಮದವರು ಎಂಬ ಬಗ್ಗೆ ಸರ್ಕಾರಿ ದಾಖಲೆಗಳನ್ನು ನೋಡಿಲ್ಲ. ಮಲ್ಲೇಗೌಡರ ಮಗ ಕರಿಯಪ್ಪ ಹುಟ್ಟಿದಾಗಿನಿಂದಲೂ ಮಾಗಳಿ ಗ್ರಾಮದವರು ಎಂದರೆ ಸರಿಯಲ್ಲ ಭೋಗನಹಳ್ಳಿ ಗ್ರಾಮದವರು. ಪ್ರಮಾಣ ಪತ್ರದಲ್ಲಿರುವ ವಿಷಯಗಳ ಬಗ್ಗೆ ಖುದ್ದು

ಮಾಹಿತಿ ಗೊತ್ತಿಲ್ಲ. ಕಾಳಮರಿ ಬಿನ್ ಸಣ್ಣೇಗೌಡ ನಮ್ಮ ಗ್ರಾಮದವರೆ. ಅವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿ. ಅವರಿಗೆ ಮಾಗಳಿ ಗ್ರಾಮದ ಸ.ನಂ.35 ರಲ್ಲಿ 28 ಗುಂಟೆ ಹಾಗೂ ಸ.ನಂ.39 ರಲ್ಲಿ 1 ಎಕರೆ 1 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಅವರು ಈಗಲೂ ಸಹ ಆ ಜಮೀನುಗಳಲ್ಲಿ ವ್ಯವಸಾಯ ಮಾಡಿಕೊಂಡು ರಾಗಿ, ಹೊಗೆಸೊಪ್ಪು ಬೆಳೆಯುತ್ತಾರೆ ಎಂದರೆ ಸರಿ. ನಾನು 1 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**